ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ ★ ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

50 GOLDEN JUBILEE JSS COLLEGE OF ARTS, COMMERCE & SCIENCE OOTY ROAD, MYSORE

1916 H.H. Jagadguru Dr. Sri Shivarathri Rajendra Mahaswamiji 2016 Centenary Celebrations

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ : **22.08.2016**

**ಪ್ರಕಟಣೆಯ ಕೃಪೆಗಾಗಿ**

## ನಗರೀಕರಣದಿಂದ ಪರಿಸರ ಹೆಚ್ಚು ಮಾಲಿನ್ಯಕ್ಕೆ ಒಳಗಾಗುತ್ತಿದೆ

– ಪ್ರೊ. ಎಸ್. ಶ್ರೀಕಂಠಸ್ವಾಮಿ

"ಪರಿಸರವು ಮಾಲಿನ್ಯಕ್ಕೆ ಒಳಗಾಗಿರುವುದು ನಮಗೆ ವೇದ್ಯವಾಗುತ್ತಿದೆ. ಆದರೆ ಅದನ್ನು ಸಂರಕ್ಷಿಸಲು ನಾವು ಪ್ರಯತ್ನಿಸುತ್ತಿಲ್ಲ. ನಮ್ಮ ಸಂಸ್ಕೃತಿಯಲ್ಲಿಯೇ ಪರಿಸರವನ್ನು ಕಾಪಾಡುವ ಅಂಶಗಳು ಅಡಗಿವೆ. ಅದನ್ನು ನಾವು ಅರ್ಥಮಾಡಿಕೊಳ್ಳಬೇಕು. ಹಳ್ಳಿಯ ಜೀವನವಿಧಾನ ಪರಿಸರಕ್ಕೆ ಪೂರಕವಾದುದು. ಆದರೆ ನಗರೀಕರಣದಿಂದ ಪರಿಸರವು ಹೆಚ್ಚು ಮಾಲಿನ್ಯಕ್ಕೆ ಒಳಗಾಗುತ್ತಿದೆ " ಎಂದು ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಪ್ರೊ. ಎಸ್. ಶ್ರೀಕಂಠಸ್ವಾಮಿ ಅವರು ಅಭಿಪ್ರಾಯಪಟ್ಟರು.

ಶ್ರೀಯುತರು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮಶತಮಾನೋತ್ಸವ ಮತ್ತು ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಚಾರ ಸಂಸ್ಥೆಯ ಸಹಯೋಗದೊಂದಿಗೆ ಆಗಸ್ಟ್ 20ರಿಂದ 22ರವರೆಗೆ ಏರ್ಪಡಿಸಲಾಗಿರುವ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಅವರು "ವ್ಯಕ್ತಿಯ ಆರೋಗ್ಯವೇ ಸಮಾಜದ ಆರೋಗ್ಯವಾಗಿದೆ. ಪ್ರತಿಯೋರ್ವ ನಾಗರೀಕನು ಆರೋಗ್ಯದಿಂದ ಇರಬೇಕು. ಅದು ಪರಿಸರದ ಸ್ವಚ್ಛತೆಯಿಂದ ಮಾತ್ರ ಸಾಧ್ಯ. ಅದಕ್ಕೆ ಹಳ್ಳಿಯ ಜೀವನ ವಿಧಾನವನ್ನು ನಾವು ಅಧ್ಯಯನ ಮಾಡಬೇಕು. ಹಳ್ಳಿ ಮತ್ತು ವಿಜ್ಞಾನ ಎಂಬ ಈ ವಸ್ತು ಪ್ರದರ್ಶನವು ಅಂತಹ ಸಾಧ್ಯತೆಗಳನ್ನು ಹುಟ್ಟು ಹಾಕಿದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳು ಕುತೂಹಲ ಬೆಳೆಸಿಕೊಂಡು ವೈಜ್ಞಾನಿಕ ಮನೋಭಾವ ಹೊಂದಿ ವಿಜ್ಞಾನ ಕ್ಷೇತ್ರಕ್ಕೆ ಕೊಡುಗೆ ನೀಡಿ" ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರಿನ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಪ್ರೊ. ಬಿ. ಗೌರಮ್ಮನವರು ಮಾತನಾಡಿ "ಜೀವನದಲ್ಲಿ ಗೆಲುವು ಸಾಧಿಸಲು ಜ್ಞಾನಬೇಕು. ಅದರಲ್ಲಿಯೂ ವಿಜ್ಞಾನದ ಅರಿವು ಅತ್ಯಗತ್ಯವಾದುದು. ಆದರೆ ಅದರಿಂದಲೇ ಪ್ರಪಂಚವನ್ನು ಅರಿಯಲು ಸಾಧ್ಯವಿಲ್ಲ. ಬಹುವಿಷಯದ ಅಧ್ಯಯನ ಇಂದು ಅತ್ಯವಶ್ಯಕ. ನಮ್ಮ ಹಿರಿಯರು ವಿಜ್ಞಾನವನ್ನು ಹೇಗೆ ಬಳಸಿಕೊಂಡಿದ್ದರು ಎಂಬುದನ್ನು ನಾವು ಅರಿಯಬೇಕು. ವಿಜ್ಞಾನ ಮತ್ತು ಹಳ್ಳಿ ಎಂಬ ಶಿರ್ಷಿಕೆಯ ಅಡಿಯಲ್ಲಿ ಪ್ರದರ್ಶನ ಗೊಂಡಿರುವ ವಿಜ್ಞಾನದ ಹೊಸ ಚಿಂತನೆಗಳನ್ನು ರೈತ ಸಮುದಾಯಕ್ಕೆ ಪರಿಚಯಿಸುವ ಕೆಲಸ ನಿಮ್ಮಿಂದ ಆಗಬೇಕು. ಆಗ ಮಾತ್ರ ಈ ವಸ್ತಪ್ರದರ್ಶನ ಸಾರ್ಥಕವಾಗುತ್ತದೆ" ಎಂದು ಹೇಳಿದರು.

ಬಹುಮಾನ ವಿತರಣೆ ಮಾಡಿದ ವೈ.ಟಿ. ಮತ್ತು ಮಾಧುರಿ ತಾತಾಚಾರಿ ಭ್ರಮರ ಟ್ರಸ್ಟ್ ಸಂಸ್ಥಾಪಕರಾದ ಶ್ರೀಮತಿ ಮಾಧುರಿ ತಾತಾಚಾರಿಯವರು ಮಾತನಾಡುತ್ತಾ "ಇಂತಹ ವಸ್ತುಪ್ರದರ್ಶನಗಳು ಅರಿವಿನ ಆಳವನ್ನು ಹೆಚ್ಚಿಸುತ್ತವೆ. ಹೊಸ ಆವಿಷ್ಕಾರಗಳಿಗೆ ಉತ್ತೇಜನ ನೀಡುತ್ತವೆ. ವಿದ್ಯಾರ್ಥಿಗಳು ಪ್ರತಿಭೆಯ ಅನಾವರಣಕ್ಕೆ ವೇದಿಕೆಯಾಗಿರುವ ಇಂತಹ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು" ಎಂದು ಕರೆ ನೀಡಿದರು.

ಕಾಲೇಜು ಸಮುಚ್ಛಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಬಹುಮಾನ ವಿತರಿಸಿದರು. ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ಸ್ವಾಗತಿಸಿದರು. ಕು. ಕೀರ್ತನಾ ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಅಭಿಜಿತ್ ಎಂ. ಸಿಂಗ್ ಅವರು ನಿರೂಪಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಬಿ.ವೈ. ಸತೀಶ್‌ಕುಮಾರ್ ವಂದಿಸಿದರು. ಡಾ. ಎಲ್. ವಿನಯ್‌ಕುಮಾರ್ ಅವರು ವರದಿ ಮಂಡಿಸಿದರು. ಸುವರ್ಣ ಮಹೋತ್ಸವ ಆಚರಣಾ ಸಮಿತಿಯ ಕಾರ್ಯದರ್ಶಿಗಳಾದ ಪ್ರೊ. ಡಿ. ಎಸ್. ಸದಾಶಿವಮೂರ್ತಿ, ವಿಜ್ಞಾನ ವಸ್ತು ಪ್ರದರ್ಶನದ ಸಂಚಾಲಕರಾದ ಡಾ. ವಿಜಯ ಮಂಜುನಾಥ್‌ಗುರು, ಸಂಘಟನಾ ಕಾರ್ಯದರ್ಶಿ ಡಾ. ಬಿ.ಕೆ. ಕೆಂಡಗಣ್ಣಸ್ವಾಮಿ ಉಪಸ್ಥಿತರಿದ್ದರು.

ಗೆ,

ಸಂಪಾದಕರು

------------------------

------------------------

ಪ್ರಾಂಶುಪಾಲರು
JSS College of Arts, Commerce & Science
Ooty Road, MYSURU-25